

# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ

# 8 ನೆಯ ತರಗತಿ ಪ್ರಥಮ ಭಾಷೆ ಕನ್ನಡ

# ಪ್ರಶ್ನೆ ಪತ್ರಿಕೆಯ ನೀಲ ನಕಾಶೆ
# ಮತ್ತು
# ಪ್ರಶ್ನೆ ಪತ್ರಿಕೆ


– : ರಚನೆ : –

**ರವೀಶ್ ಕುಮಾರ್ ಬಿ.**

ನಿವೃತ್ತ ಕನ್ನಡ ಭಾಷಾ ಶಿಕ್ಷಕರು
ಮತ್ತು ರಾಜ್ಯ ಸಂಪನ್ಮೂಲ ವ್ಯಕ್ತಿಗಳು

ಮೈಸೂರು – 570033

ಸಂಚಾರಿ ವಾಣಿ ಸಂಖ್ಯೆ : 9448958498

# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ

# 8 ನೆಯ ತರಗತಿ ಪ್ರಥಮ ಭಾಷೆ ಕನ್ನಡ

# ಪ್ರಶ್ನೆ ಪತ್ರಿಕೆಯ ನೀಲ ನಕಾಶೆ
# ಮತ್ತು
# ಪ್ರಶ್ನೆ ಪತ್ರಿಕೆ

# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ

# 8 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

# ಪರಿವಿಡಿ

| ಹಂತದ ಸಂಖ್ಯೆ | ಹಂತದ ಹೆಸರು | ಪುಟ ಸಂಖ್ಯೆ ಇಂದ | ಪುಟ ಸಂಖ್ಯೆ ವರೆಗೆ |
|---|---|---|---|
| 1 | ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ. | 3 | 3 |
| 2 | ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ | 3 | 3 |
| 3 | ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ | 3 | 3 |
| 4 | ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ. | 4 | 4 |
| 5 | ನೀಲ ನಕಾಶೆ | 5 | 5 |
| 6 | ಪ್ರಶ್ನೆ ಪತ್ರಿಕೆ | 6 | 7 |
| 7 | ಮೌಲ್ಯಾಂಶ / ಉತ್ತರ ಸೂಚಿ ಮತ್ತು ಅಂಕ ವಿತರಣೆ | 8 | 11 |

# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ

# 8 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

**ಹಂತ : 1. ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಉದ್ದಿಷ್ಟಗಳು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಜ್ಞಾನ / ಸ್ಮರಣೆ | 30.00 | 12 | 12 |
| 2 | ಗ್ರಹಿಕೆ | 37.50 | 15 | 09 |
| 3 | ಅಭಿವ್ಯಕ್ತಿ | 27.50 | 11 | 04 |
| 4 | ಪ್ರಶಂಸೆ | 05.00 | 02 | 01 |
| | **ಒಟ್ಟು** | **100** | **40** | **26** |

**ಹಂತ : 2. ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಪ್ರಶ್ನೆಯ ಸ್ವರೂಪ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ವಸ್ತುನಿಷ್ಠ | 20.00 | 08 | 08 |
| 2 | ಕಿರು ಉತ್ತರ – 1 | 17.50 | 07 | 07 |
| 3 | ಕಿರು ಉತ್ತರ – 2 | 45.00 | 18 | 09 |
| 4 | ದೀರ್ಘ ಉತ್ತರ – 1 | 07.50 | 03 | 01 |
| 5 | ದೀರ್ಘ ಉತ್ತರ – 2 | 10.00 | 04 | 01 |
| | **ಒಟ್ಟು** | **100** | **40** | **26** |

**ಹಂತ : 3. ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಕ್ಲಿಷ್ಟತೆಯ ಮಟ್ಟ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಸುಲಭ | 30.00 | 12 | 12 |
| 2 | ಸಾಧಾರಣ | 47.50 | 19 | 11 |
| 3 | ಕಠಿಣ | 22.5 | 09 | 03 |
| | **ಒಟ್ಟು** | **100** | **40** | **26** |

**ಹಂತ : 4(ಎ). ಪಠ್ಯಾಂಶವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ವಿಷಯ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | **ಗದ್ಯ ಒಟ್ಟು** | **30** | **11** | **06** |
| 2 | **ಪದ್ಯ ಒಟ್ಟು** | **30** | **12** | **08** |
| 3 | **ಪಠ್ಯಪೂರಕ ಅಧ್ಯಯನ** | **10** | **05** | **03** |
| 3 | **ವ್ಯಾಕರಣ, ವಾಕ್ಯ ರಚನೆ ಒಟ್ಟು** | **30** | **12** | **09** |
| | **ಸಮಗ್ರ ಒಟ್ಟು** | **100** | **40** | **26** |

**ಹಂತ : 4(ಬಿ) ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

### 1. ಗದ್ಯ ಭಾಗ

| ಕ್ರ.ಸಂ. | ಗದ್ಯ ಪಾಠದ ಹೆಸರು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಮಗ್ಗದ ಸಾಹೇಬ | 05.00 | 02 | **1** |
| 2 | ನೀರು ಕೊಡದ ನಾಡಿನಲ್ಲಿ | 07.50 | 03 | **2** |
| 3 | ತಲಕಾಡಿನ ವೈಭವ | 07.50 | 03 | **2** |
| 4 | ಸಾರ್ಥಕ ಬದುಕಿನ ಸಾಧಕ | 07.50 | 03 | **1** |
| | **ಗದ್ಯ ಒಟ್ಟು** | **27.50** | **11** | **6** |

### 2. ಪದ್ಯ ಭಾಗ

| ಕ್ರ.ಸಂ | ಪದ್ಯ ಪಾಠದ ಹೆಸರು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಕನ್ನಡಿಗರ ತಾಯಿ | 07.50 | 03 | 02 |
| 2 | ಭಾರತೀಯತೆ | 07.50 | 03 | 02 |
| 3 | ಗೆಳೆತನ | 07.50 | 03 | 02 |
| 4 | ಬಹುಮಾನ | 07.50 | 03 | 02 |
| | **ಪದ್ಯ ಒಟ್ಟು** | **30.00** | **12** | **08** |

### 3. ಪಠ್ಯಪೋಷಕ ಅಧ್ಯಯನ

| ಕ್ರ.ಸಂ | ಪಾಠದ ಹೆಸರು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಕಟ್ಟುವೆವು ನಾವು | 05.00 | 02 | 01 |
| 2 | ಸಾರ್ಥಕ | 05.00 | 02 | 01 |
| 3 | ನನ್ನಾಸೆ | 02.50 | 01 | 01 |
| | **ಪಠ್ಯ ಪೋಷಕ ಅಧ್ಯಯನ ಒಟ್ಟು** | **12.50** | **05** | **03** |

### 3. ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ

| ಕ್ರ.ಸಂ. | ಪಾಠದ ಹೆಸರು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ವ್ಯಾಕರಣಾಂಶಗಳು | 20 | 08 | 08 |
| 2 | ಪತ್ರ / ಪ್ರಬಂಧ ಲೇಖನ | 10 | 04 | 01 |
| | **ಒಟ್ಟು** | **30** | **12** | **09** |

## ಹಂತ : 5(ಎ). ನೀಲ ನಕಾಶೆ ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ

## 8 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

| ಕ್ರ. ಸಂ. | ಪಾಠದ ಹೆಸರು | ಜ್ಞಾನ / ಸ್ಮರಣೆ | | ಗ್ರಹಿಕೆ | | | ಅಭಿವ್ಯಕ್ತಿ | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ. ಉ. 1 | ಕಿ. ಉ. 1 | ಕಿ. ಉ. 2 | ದೀ ಉ. 1 | ಕಿ. ಉ. 2 | ದೀ ಉ. 1 | ದೀ ಉ. 2 | ಕಿ. ಉ. 1 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ ಉ. 2 | | | |
| 1 | ಮಗ್ಗದ ಸಾಹೇಬ | ** | ** | ** | ** | ** | 1(2) | ** | ** | ** | ** | ** | 1(2) | ** | ** | ** | 2 | 1 |
| 2 | ನೀರು ಕೊಡದ ನಾಡಿನಲ್ಲಿ | ** | 1(1) | ** | 1(2) | ** | ** | ** | ** | ** | ** | 1(1) | 1(2) | ** | ** | ** | 3 | 2 |
| 3 | ತಲಕಾಡಿನ ವೈಭವ | ** | 1(1) | ** | 1(2) | ** | ** | ** | ** | ** | ** | 1(1) | 1(2) | ** | ** | ** | 3 | 2 |
| 4 | ಸಾರ್ಥಕ ಬದುಕಿನ ಸಾಧಕ | ** | ** | ** | ** | ** | ** | 1(3) | ** | ** | ** | ** | ** | 1(3) | ** | ** | 3 | 1 |
| | **ಗದ್ಯ ಒಟ್ಟು** | ** | **2(1)** | ** | **2(2)** | ** | **1(2)** | **1(3)** | ** | ** | ** | **2(1)** | **3(2)** | **1(3)** | ** | ** | **11** | **6** |
| 1 | ಕನ್ನಡಿಗರ ತಾಯಿ | ** | ** | 1(1) | 1(2) | ** | ** | ** | ** | ** | ** | 1(1) | 1(2) | ** | ** | ** | 3 | 2 |
| 2 | ಭಾರತೀಯತೆ | ** | ** | 1(1) | ** | ** | ** | ** | ** | 1(2) | ** | 1(1) | 1(2) | ** | ** | ** | 3 | 2 |
| 3 | ಗೆಳೆತನ | ** | ** | 1(1) | 1(2) | ** | ** | ** | ** | ** | ** | 1(1) | 1(2) | ** | ** | ** | 3 | 2 |
| 4 | ಬಹುಮಾನ | ** | 1(1) | ** | ** | ** | 1(2) | ** | ** | ** | ** | 1(1) | 1(2) | ** | ** | ** | 3 | 2 |
| | **ಪದ್ಯ ಒಟ್ಟು** | ** | **1(1)** | **3(1)** | **2(2)** | ** | **1(2)** | ** | ** | **1(2)** | ** | **4(1)** | **4(2)** | ** | ** | ** | **12** | **8** |
| 1 | ಕಟ್ಟುವೆವು ನಾವು | ** | ** | ** | 1(2) | ** | ** | ** | ** | ** | ** | ** | 1(2) | ** | ** | ** | 2 | 1 |
| 2 | ಸಾರ್ಥಕ | ** | ** | ** | 1(2) | ** | ** | ** | ** | ** | ** | ** | 1(2) | ** | ** | ** | 2 | 1 |
| 3 | ಆಹುತಿ | ** | 1(1) | ** | ** | ** | ** | ** | ** | ** | ** | 1(1) | ** | ** | ** | ** | 1 | 1 |
| | **ಪಠ್ಯಪೋಷಕ ಅಧ್ಯಯನ** | ** | 1(1) | ** | **2(2)** | ** | ** | ** | ** | ** | ** | 1(1) | **2(2)** | ** | ** | ** | **5** | **3** |
| 5 | ಪತ್ರ / ಪ್ರಬಂಧ ಲೇಖನ | ** | ** | ** | ** | ** | ** | ** | 1(4) | ** | ** | ** | ** | ** | 1(4) | ** | 4 | 1 |
| 6 | ವ್ಯಾಕರಣ | 8(1) | ** | ** | ** | ** | ** | ** | ** | ** | 8(1) | ** | ** | ** | ** | ** | 8 | 8 |
| | **ಒಟ್ಟು** | 8(1) | ** | ** | ** | ** | ** | ** | 1(4) | ** | 8(1) | ** | ** | ** | ** | ** | **12** | **9** |
| | **ಸಮಗ್ರ ಒಟ್ಟು** | **8(1)** | **4(1)** | **3(1)** | **6(2)** | ** | **2(2)** | **1(3)** | **1(4)** | **1(2)** | **8(1)** | **7(1)** | **9(2)** | **1(3)** | **1(4)** | | **40** | **26** |
| | | **12** | | **15** | | | **11** | | | **2** | **40** | | | | | | | |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.**

# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ

## 8 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆ

**ಸಮಯ : 1.30 ಗಂಟೆಗಳು** **ಗರಿಷ್ಠ ಅಂಕಗಳು : 40**

**ಕೊಟ್ಟಿರುವ ಪ್ರತಿಪ್ರಶ್ನೆಗೂ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಸರಿಯುತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 4*1=4**

1. ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳ ಸಂಖ್ಯೆ;
   (ಅ) 06 (ಆ) 07 (ಇ) 10 (ಈ) 13
2. ಇವುಗಳಲ್ಲಿ ವಿಜಾತೀಯ ಸಂಯುಕ್ತಾಕ್ಷರಕ್ಕೆ ಉದಾಹರಣೆಯಾದ ಪದ ಇದು;
   (ಅ) ಭಕ್ತ (ಆ) ಸಿದ್ಧ (ಇ) ಅಣ್ಣ (ಈ) ತಮ್ಮ
3. 'ಶಾಲೆಯಲ್ಲಿ' ಪದದಲ್ಲಿ ಇರುವ ವಿಭಕ್ತಿಯ ಹೆಸರು;
   (ಅ) ಚತುರ್ಥಿ (ಆ) ಪಂಚಮಿ (ಇ) ಷಷ್ಠಿ (ಈ) ಸಪ್ತಮಿ
4. 'ಹೆಗಲುಗೊಟ್ಟು' ಪದದಲ್ಲಿ ಆಗಿರುವ ಸಂಧಿ.
   (ಅ) ಲೋಪ (ಆ) ಆಗಮ (ಇ) ಆದೇಶ (ಈ) ಜಶ್ತ್ವ

**ಕೊಟ್ಟಿರುವ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ. 4*1 = 4**

5. ವಿನಯ : ಅವಿನಯ : : ಕೀರ್ತಿ : ______________________
6. ಪುಣ್ಯ : ಹೂನ್ಯ : : ವರ್ಷ : ________________
7. ಇಳೆ : ಭೂಮಿ : : ವನ : ____________
8. ಚಿಕ್ಕಪ್ಪ : ದೇಶೀಯಪದ : : ಬ್ಯಾಂಕ್ : ______________

**ಕೊಟ್ಟಿರುವ ಪ್ರತಿಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ. 7*1=7**

9. ವರದಕ್ಷಿಣೆ ಪಿಶಾಚಿ ಯಾರನ್ನು ಬಲಿ ತೆಗೆದುಕೊಂಡಿದೆ?
10. ಮನೆಗೆ ಬಂದವರನ್ನು ಹೇಗೆ ಸತ್ಕರಿಸುವ ಸಂಪ್ರದಾಯ ನಮ್ಮಲ್ಲಿದೆ?
11. 'ರಾಯ', 'ಅಣ್ಣ' ಎಂದು ಯಾರನ್ನು ಕರೆಯುತ್ತಿದ್ದರು?
12. ರಾಷ್ಟ್ರಕವಿ ಗೋವಿಂದ ಪೈ ಅವರ ಪ್ರಕಾರ ನಮ್ಮನ್ನು ಆಳುವವಳು ಯಾರು?
13. ನಮ್ಮ ಧ್ವಜವನ್ನು ಎತ್ತಿ ಹಿಡಿದಿರುವವರು ಯಾರು?
14. ಕವಿ ಚೆನ್ನವೀರ ಕಣವಿ ಅವರ ಕಾಲ ಮತ್ತು ಸ್ಥಳ ತಿಳಿಸಿ.
15. ಮನುಷ್ಯನ ಮಾತಿಗೆ ಕೋಗಿಲೆ ಕೊಟ್ಟ ಉತ್ತರವೇನು?

**ಕೊಟ್ಟಿರುವ ಪ್ರತಿಪ್ರಶ್ನೆಗೂ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ. 5*2=10**

16. ಲೇಖಕಿ ನೇಮಿಚಂದ್ರ ಅವರ ಪ್ರಕಾರ ನಾಗರಿಕತೆಯ ದೊಡ್ಡ ಅನಾಹುತಗಳಾಗಿ ಕಾಣಿಸಿಕೊಳ್ಳುತ್ತಿರುವ ಆಚರಣೆಗಳಾವುವು?
17. ಶಿವನಸಮುದ್ರದಲ್ಲಿ ಸುಬ್ರಹ್ಮಣ್ಯಮ್ ಮಾಡಿದ ವ್ಯವಸ್ಥೆಗಳಾವುವು?
18. ಕವಿ ಗೋವಿಂದ ಪೈ ಅವರ ಪ್ರಕಾರ ಕನ್ನಡದ ಕವಿಶ್ರೇಷ್ಠರ ಹಿರಿಮೆಯೇನು?
19. ಹೊಸ ನಾಡೊಂದನ್ನು ಕಟ್ಟ ಬಯಸುವ ಕವಿ ಉತ್ಸಾಹ ಉದ್ವೇಗದಲ್ಲಿ ಹೇಳುವ ಮಾತುಗಳಾವುವು?
20. ಕವಿ ದಿನಕರ ದೇಸಾಯಿ ಅವರ ಪ್ರಕಾರ ಬೂದಿಯನ್ನು ಕೊಳದಲ್ಲಿ ಬಿಡುವುದರಿಂದ ಬದುಕು ಧನ್ಯವಾಗುವುದು ಹೇಗೆ? ವಿವರಿಸಿ.

**ಕೊಟ್ಟಿರುವ ಪ್ರತಿಹೇಳಿಕೆಯನ್ನೂ ಸಂದರ್ಭದೊಡನೆ ವಿವರಿಸಿರಿ. 2*2=4**

21. "ದೇವರು ದೊಡ್ಡವನು; ದೇವರು ದಯಾಳು"
22. "ಬಲು ಚೆಲುವಿದೆ ನಿನ್ನೀ ಗಾನ"

**ಕೊಟ್ಟಿರುವ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.** **1*2=2**

23. ನಾಡಿಗಾಗಿ ತನುವ ತೆತ್ತ ಹುತಾತ್ಮರ ಸ್ಮರಣೆಯಲ್ಲಿ
ನಮ್ಮ ಕಷ್ಟದಲ್ಲು ನೆರೆಗೆ ನೆರಳನೀವ ಕರುಣೆಯಲ್ಲಿ
ದಾರಿ ಬಳಸಿ ಏರುವಲ್ಲಿ ಬಿರುಗಾಳಿಯೆ ಮೊಳಗುವಲ್ಲಿ
ನಮ್ಮ ಗುರಿಯ ಬೆಳಕಿನೆಡೆಗೆ ನಡೆವ ಧೀರ ಪಯಣದಲ್ಲಿ

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1*2=2**

24. ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧು
______________________________
______________________________
______________________________
______________________________
ಉಂಡವನು ಕಂಡಿಹನು ಇದರ ಹದನು.

**ಕೊಟ್ಟಿರುವ ಪ್ರಶ್ನೆಗಳಲ್ಲಿ ಯಾವುದಾದರೂ ಒಂದಕ್ಕೆ ಸುಮಾರು ಆರು/ಏಳು ವಾಕ್ಯಗಳಲ್ಲಿ ಉತ್ತರಿಸಿರಿ.** **1*3=3**

25. * ಡಿವಿಜಿ ಅವರ ವ್ಯಕ್ತಿತ್ವವನ್ನು ಸಂಗ್ರಹಿಸಿ ಬರೆಯಿರಿ.
* ಡಿವಿಜಿ ಅವರಿಗೂ ಅವರ ಶ್ರೀಮತಿ ಅವರಿಗೂ ನಡೆದ ಸಂಭಾಷಣೆಯನ್ನು ಬರೆಯಿರಿ.

**26. ನಿಮ್ಮ ಶಾಲೆಯಲ್ಲಿ ನಡೆಯುವ ಪ್ರತಿಭೋತ್ಸವ ಕಾರ್ಯಕ್ರಮಕ್ಕೆ ಆಗಮಿಸುವಂತೆ ತಿಳಿಸಿ, ಗೆಳೆಯನಿಗೆ ಪತ್ರ ಬರೆಯಿರಿ.** **1*4=4**

**ಅಥವಾ**

**ಕೊಟ್ಟಿರುವ ಯಾವುದಾದರೂ ಒಂದು ವಿಷಯವನ್ನು ಕುರಿತು ಹತ್ತು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.**

* ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ವಿದ್ಯಾರ್ಥಿಗಳ ಪಾತ್ರ.
* ಶಾಲಾ ಸ್ವಚ್ಛತೆಯನ್ನು ಕಾಪಾಡುವಲ್ಲಿ ವಿದ್ಯಾರ್ಥಿಗಳ ಪಾತ್ರ.

# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ

## 8 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆ

# ಮೌಲ್ಯಮಾಪನ ಸೂಚಿ (ಮಾದರಿ ಉತ್ತರ)

**ಗರಿಷ್ಠ ಅಂಕಗಳು : 40**

**ಕೊಟ್ಟಿರುವ ಪ್ರತಿಪ್ರಶ್ನೆಗೂ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಸರಿಯುತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 4*1=4**

**1.** ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳ ಸಂಖ್ಯೆ;
(ಅ) 06 (ಆ) 07 (ಇ) 10 (ಈ) 13
**ಉತ್ತರ : (ಇ) 10**

**2.** ಇವುಗಳಲ್ಲಿ ವಿಜಾತೀಯ ಸಂಯುಕ್ತಾಕ್ಷರಕ್ಕೆ ಉದಾಹರಣೆಯಾದ ಪದ ಇದು;
(ಅ) ಭಕ್ತ (ಆ) ಸಿದ್ಧ (ಇ) ಅಣ್ಣ (ಈ) ತಮ್ಮ
**ಉತ್ತರ : (ಅ) ಭಕ್ತ**

**3.** **'ಶಾಲೆಯಲ್ಲಿ'** ಪದದಲ್ಲಿ ಇರುವ ವಿಭಕ್ತಿಯ ಹೆಸರು;
(ಅ) ಚತುರ್ಥಿ (ಆ) ಪಂಚಮಿ (ಇ) ಷಷ್ಠಿ (ಈ) ಸಪ್ತಮಿ
**ಉತ್ತರ : (ಈ) ಸಪ್ತಮಿ**

**4.** **'ಹೆಗಲುಗೊಟ್ಟು'** ಪದದಲ್ಲಿ ಆಗಿರುವ ಸಂಧಿ.
(ಅ) ಲೋಪ (ಆ) ಆಗಮ (ಇ) ಆದೇಶ (ಈ) ಜಶ್ತ್ವ
**ಉತ್ತರ : (ಇ) ಆದೇಶ**

**ಕೊಟ್ಟಿರುವ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ. 4*1 = 4**

**5.** ವಿನಯ : ಅವಿನಯ : : ಕೀರ್ತಿ : **ಅಪಕೀರ್ತಿ**
**6.** ಪುಣ್ಯ : ಹೂನ್ಯ : : ವರ್ಷ : **ವರುಸ**
**7.** ಇಳೆ : ಭೂಮಿ : : ವನ : **ಕಾಡು**
**8.** ಚಿಕ್ಕಪ್ಪ : ದೇಶೀಯಪದ : : **ಬ್ಯಾಂಕ್ : ಅನ್ಯದೇಶೀಯ ಪದ**

**ಕೊಟ್ಟಿರುವ ಪ್ರತಿಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ. 7*1=7**

**9. ವರದಕ್ಷಿಣೆ ಪಿಶಾಚಿ ಯಾರನ್ನು ಬಲಿ ತೆಗೆದುಕೊಂಡಿದೆ?**
ವರದಕ್ಷಿಣೆ ಪಿಶಾಚಿ ಅನೇಕ ಸುಕುಮಾರಿ ಹೆಣ್ಣುಮಕ್ಕಳನ್ನು ಬಲಿ ತೆಗೆದುಕೊಂಡಿದೆ.

**10. ಮನೆಗೆ ಬಂದವರನ್ನು ಹೇಗೆ ಸತ್ಕರಿಸುವ ಸಂಪ್ರದಾಯ ನಮ್ಮಲ್ಲಿದೆ?**
ಮನೆಗೆ ಬಂದವರನ್ನು ಕುಡಿಯಲು ಮೊದಲು ನೀರನ್ನು ಕೊಟ್ಟು ಸತ್ಕರಿಸುವ ಸಂಪ್ರದಾಯ ನಮ್ಮಲ್ಲಿದೆ.

**11. 'ರಾಯ', 'ಅಣ್ಣ' ಎಂದು ಯಾರನ್ನು ಕರೆಯುತ್ತಿದ್ದರು?**
ಜನರು 'ರಾಯ', 'ಅಣ್ಣ' ಎಂದು **ಚಾವುಂಡರಾಯನನ್ನು** ಕರೆಯುತ್ತಿದ್ದರು.

**12. ರಾಷ್ಟ್ರಕವಿ ಗೋವಿಂದ ಪೈ ಅವರ ಪ್ರಕಾರ ನಮ್ಮನ್ನು ಆಳುವವಳು ಯಾರು?**
ರಾಷ್ಟ್ರಕವಿ ಗೋವಿಂದ ಪೈ ಅವರ ಪ್ರಕಾರ ನಮ್ಮನ್ನು ಆಳುವವರು **ಕನ್ನಡ ತಾಯಿ (ಕನ್ನಡಿಗರ ಮಾತೆ).**

**13. ನಮ್ಮ ಧ್ವಜವನ್ನು ಎತ್ತಿ ಹಿಡಿದಿರುವವರು ಯಾರು?**
ನಮ್ಮ ಧ್ವಜವನ್ನು ಎತ್ತಿ ಹಿಡಿದಿರುವವರು **ಯೋಧರು.**

**14. ಕವಿ ಚೆನ್ನವೀರ ಕಣವಿ ಅವರ ಕಾಲ ಮತ್ತು ಸ್ಥಳ ತಿಳಿಸಿ.**
**ಶ್ರೀ ಚೆನ್ನವೀರಕಣವಿ ಅವರು ಕ್ರಿ. ಶ. 1928** ರಲ್ಲಿ ಗದಗ ಜಿಲ್ಲೆಯ **ಹೊಂಬಳ**ದಲ್ಲಿ ಜನಿಸಿದರು.

**15. ಮನುಷ್ಯನ ಮಾತಿಗೆ ಕೋಗಿಲೆ ಕೊಟ್ಟ ಉತ್ತರವೇನು?**
ಮನುಷ್ಯನ ಮಾತಿಗೆ ಕೋಗಿಲೆಯು **'ಕುಹೂ! ಕುಹೂ!'** ಎಂದು ಉತ್ತರ ಕೊಟ್ಟಿತು.

**ಕೊಟ್ಟಿರುವ ಪ್ರತಿಪ್ರಶ್ನೆಗೂ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.** **5*2=10**

16. **ಲೇಖಕಿ ನೇಮಿಚಂದ್ರ ಅವರ ಪ್ರಕಾರ ನಾಗರಿಕತೆಯ ದೊಡ್ಡ ಅನಾಹುತಗಳಾಗಿ ಕಾಣಿಸಿಕೊಳ್ಳುತ್ತಿರುವ ಆಚರಣೆಗಳಾವುವು?**
ಲೇಖಕಿ ನೇಮಿಚಂದ್ರ ಅವರ ಪ್ರಕಾರ ಕೊಳ್ಳುಬಾಕತನ, ಲಾಭಕೋರತನದ ರೋಗಗಳು ಸಾಂಕ್ರಾಮಿಕವಾಗಿ ಎಲ್ಲ ನೆಲದಲ್ಲೂ ಹರಡಿ, ಭಾರತಕ್ಕೂ ಲಗ್ಗೆ ಇಟ್ಟಿವೆ. ಮದರ್ಸ್ ಡೇ, ಪಾದರ್ಸ್ ಡೇ ವ್ಯಾಲೆಂಟೈನ್ ಡೇ ನಾಗರಿಕತೆಯ ದೊಡ್ಡ ಅನಾಹುತಗಳಾಗಿ ಕಾಣಿಸಿಕೊಳ್ಳುತ್ತಿರುವ ಆಚರಣೆಗಳಾಗಿವೆ. **ಇವು** ಉಕ್ಕಿದ ಪ್ರೀತಿಯ ದ್ಯೋತಕವಲ್ಲ. ಗಿಫ್ಟ್, ಗ್ರೀಟಿಂಗ್ ಕಾರ್ಡ್ ಮಾರುವ ಹೊಸ ಹುನ್ನಾರಗಳು ಎಂದು ಸರ್ವರಿಗೂ ವೇದ್ಯವಾಗಿರುವ ಅಂಶಗಳಾಗಿವೆ.

17. **ಶಿವನಸಮುದ್ರದಲ್ಲಿ ಸುಬ್ರಹ್ಮಣ್ಯಮ್ ಮಾಡಿದ ವ್ಯವಸ್ಥೆಗಳಾವುವು?**
ಸುಬ್ರಹ್ಮಣ್ಯಂ ಲೇಖಕರು ಶಿವನಸಮುದ್ರವನ್ನು ಒಳಸೇರುವ ಮುನ್ನ ಬಾಗಿಲ ಬಳಿ ನಿಂತು ವಿಶ್ವಾಸದಿಂದ ಸ್ವಾಗತಿಸಿದರು. ನಿಲ್ಮನೆಯನ್ನು ಕೂಡಲೇ ಖಾಲಿ ಮಾಡಿಸಿದರು, ಹಾಸಿಗೆ ಹಾಸಿ ಕೊಟ್ಟರು, ಊಟ ಉಪಚಾರದ ಬಗೆಗೆ ಕೇಳಿದರು. ಕೊನೆಗೆ ಹೋಗುವಾಗ 'ಗುಡ್ ನಾಯಿಟ್' ಎಂದು ಕೂಡ ಹೇಳಿದರು.

18. **ಕವಿ ಗೋವಿಂದ ಪೈ ಅವರ ಪ್ರಕಾರ ಕನ್ನಡದ ಕವಿಶ್ರೇಷ್ಠರ ಹಿರಿಮೆಯೇನು?**
ಕನ್ನಡದ ಆದಿ ಮಹಾಕವಿ ಪಂಪ, ಕವಿ ಚಕ್ರವರ್ತಿ ರನ್ನ, ಕವಿ ಚೂತವನ ಚೈತ್ರನಾದ ಲಕ್ಷ್ಮೀಶ, ಕವಿರತ್ನ ಜನ್ನ, ಷಡಕ್ಷರಿ, ಮುದ್ದಣ ಮೊದಲಾದವರು ಮಹಾಕಾವ್ಯಗಳನ್ನು ರಚಿಸಿದ್ದಾರೆ. ದಾಸ ಶ್ರೇಷ್ಠರಾದ ಪುರಂದರದಾಸರು ಮೊದಲಾದವರು ಭಕ್ತಿ ಪ್ರಧಾನವಾದ ಕೀರ್ತನೆಗಳನ್ನು ರಚಿಸಿದ್ದಾರೆ. ವಿದ್ಯಾರಣ್ಯ ಮಹರ್ಷಿಗಳು ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಪ್ರೇರಕ ಶಕ್ತಿಯಾಗಿದ್ದಾರೆ. ಹೀಗೆ ಕನ್ನಡದ ಈ ಶ್ರೇಷ್ಠ ಕವಿಗಳು ಹಾಗೂ ಸಂತರು ಕನ್ನಡ ತಾಯಿಯ ಬಸಿರ ಹೊನ್ನಗನಿಯಾಗಿದ್ದಾರೆ.

19. **ಹೊಸ ನಾಡೊಂದನ್ನು ಕಟ್ಟ ಬಯಸುವ ಕವಿ ಉತ್ಸಾಹ ಉದ್ವೇಗದಲ್ಲಿ ಹೇಳುವ ಮಾತುಗಳಾವುವು?**
ಉತ್ಸಾಹ ಉದ್ವೇಗ ಉದ್ರೇಕಗಳ ವೀರ ಯುವಜನರೇ ನಾಡ ಬಾವುಟವು. ಆ ಬಾವುಟದ ಹಾರಾಟಕ್ಕೆ ಆಕಾಶವೇ ಗಡಿ. ಅದರ ಹಾರಾಟವನ್ನು ತಡೆಯುವಂತಹ ಯಾವುದೇ ಶಕ್ತಿಯನ್ನು ಬರಲು ಬಿಡುವುದಿಲ್ಲ. ಅದನ್ನು ತಡೆಯುವ ಶಕ್ತಿ ಉಳ್ಳವರು, ಅದನ್ನು ಹೊಡೆಯುವ ಸಾಮರ್ಥ್ಯ ಉಳ್ಳವರು ಯಾರಾದರೂ ಸಹ ಬನ್ನಿರಿ. ಕೆಡೆ ನುಡಿಯುವ, ಕೆಡೆ ಬಗೆಯುವ ಕೆಡಕು ಜನರೇ ಬನ್ನಿರಿ ನಿಮಗಿದೋ ಹೋರಾಟದ ವೀಳೆಯವನು ಕೊಡುತ್ತಿರುವೆವು. ನಿಮ್ಮೆಲ್ಲರನ್ನು ನಾಶಮಾಡಿ, ನಿಮ್ಮ ಮಸಣದ ಮೇಲೆ ಭವ್ಯವಾದ ಸುಖದ ನಾಡೊಂದನ್ನು ಕಟ್ಟುತ್ತೇವೆ ಎಂದು ಕವಿಯು ಹೇಳುತ್ತಾರೆ.

20. **ಕವಿ ದಿನಕರ ದೇಸಾಯಿ ಅವರ ಪ್ರಕಾರ ಬೂದಿಯನ್ನು ಕೊಳದಲ್ಲಿ ಬಿಡುವುದರಿಂದ ಬದುಕು ಧನ್ಯವಾಗುವುದು ಹೇಗೆ? ವಿವರಿಸಿ.**
ನಮ್ಮ ಹೆಣದ ಬೂದಿಯನ್ನು ಕೊಳದಲ್ಲಿ ಬಿಡುವುದರಿಂದ ಅದು ಕೆಸರಿನೊಡನೆ ಕೂಡಿ ಫಲವತ್ತಾದ ಮಣ್ಣಾಗುತ್ತದೆ. ಅದರಲ್ಲಿ ಕಮಲ ಅರಳಿದಾಗ ನಾವು ಹುಟ್ಟು ಸಾವಿನಿಂದ ಮುಕ್ತರಾಗಿ ನಮ್ಮ ಬದುಕು ಧನ್ಯವಾಗುವುದು.

**ಕೊಟ್ಟಿರುವ ಪ್ರತಿಹೇಳಿಕೆಯನ್ನೂ ಸಂದರ್ಭದೊಡನೆ ವಿವರಿಸಿರಿ.** **2*2=4**

21. **"ದೇವರು ದೊಡ್ಡವನು; ದೇವರು ದಯಾಳು"**
**ಆಯ್ಕೆ :–** ಪ್ರಸ್ತುತ ವಾಕ್ಯವನ್ನು ಶ್ರೀ **ಬಾಗಲೋಡಿ ದೇವರಾಯ** ಅವರು ಬರೆದಿರುವ **'ಸಮಗ್ರ ಕತೆಗಳು'** ಎಂಬ ಕೃತಿಯಿಂದ ಆಯ್ದ **'ಮಗ್ಗದ ಸಾಹೇಬ'** ಎಂಬ ಸಣ್ಣ ಕತೆಯಿಂದ ಆರಿಸಲಾಗಿದೆ.
**ಸಂದರ್ಭ:–** ಕರೀಮನಿಗೆ ಭಾರತದ ರಾಷ್ಟ್ರಪತಿ ಅವರು ಪದ್ಮಭೂಷಣ ಬಿರುದನ್ನು ಕೊಡುತ್ತಿರುವ ಭಾವಚಿತ್ರವು ಪ್ರಕಟವಾಗಿದ್ದ ವಾರ್ತಾಪತ್ರಿಕೆಯನ್ನು ನಿವೃತ್ತ ಮಾಸ್ತರ ಶಂಕರಪ್ಪನವರು ರಹೀಮನಿಗೆ ತೋರಿಸಿ ಅದರ ಬಗ್ಗೆ ವಿವರಿಸಿದ ಸಂದರ್ಭದಲ್ಲಿ ರಹೀಮನು ಈ ಮಾತನ್ನು ಹೇಳುತ್ತಾನೆ.
**ಸ್ವಾರಸ್ಯ:–** ತಾನು ತಿರಸ್ಕರಿಸಿದ ಮಗನ ಸಾಧನೆಯನ್ನು ಕಂಡ ರಹೀಮನ ಭಾವುಕತನ ಇಲ್ಲಿ ವ್ಯಕ್ತವಾಗಿದೆ.

22. **"ಬಲು ಚೆಲುವಿದೆ ನಿನ್ನೀ ಗಾನ"**
**ಆಯ್ಕೆ :** ಈ ವಾಕ್ಯವನ್ನು ಕುವೆಂಪು ರಚಿಸಿರುವ 'ನವಿಲು' ಕವನಸಂಕಲನದಿಂದ ಆಯ್ದ 'ಬಹುಮಾನ' ಎನ್ನುವ ಕವಿತೆಯಿಂದ ಆರಿಸಿಕೊಳ್ಳಲಾಗಿದೆ.
**ಸಂದರ್ಭ :** ಅರಣ್ಯದಲ್ಲಿ ಮರದ ಮೇಲೆ ಕುಳಿತ ಕೋಗಿಲೆಯು ಕುಹೂ! ಕುಹೂ! ಎಂದು ಮಧುರವಾಗಿ ಹಾಡಿದ ಧ್ವನಿಯನ್ನು ಕೇಳಿದ ಮನುಷ್ಯನು ಸಂತಸದಿಂದ ನುಡಿದ ಸಂದರ್ಭದಲ್ಲಿ ಈ ಮಾತು ಬಂದಿದೆ.
**ಸ್ವಾರಸ್ಯ :** ನಿಶ್ಶಬ್ದವಾದ ಪರ್ವತ ಕಾನನಶ್ರೇಣಿಯ ಮರದ ಮೇಲೆ ಕುಳಿತು ಹಾಡಿದ ಕೋಗಿಲೆಯ ಮಧುರವಾದ ಧ್ವನಿಯನ್ನು ಕೇಳಿ ಮನಸೋತ ಮನುಷ್ಯನು ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿರುವುದು ಈ ಮಾತಿನ ಸ್ವಾರಸ್ಯ.

**ಕೊಟ್ಟಿರುವ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.** **1*2=2**

23. ನಾಡಿಗಾಗಿ ತನುವ ತೆತ್ತ ಹುತಾತ್ಮರ ಸ್ಮರಣೆಯಲ್ಲಿ
ನಮ್ಮ ಕಷ್ಟದಲ್ಲು ನೆರೆಗೆ ನೆರಳನೀವ ಕರುಣೆಯಲ್ಲಿ
ದಾರಿ ಬಳಸಿ ಏರುವಲ್ಲಿ ಬಿರುಗಾಳಿಯೆ ಮೊಳಗುವಲ್ಲಿ
ನಮ್ಮ ಗುರಿಯ ಬೆಳಕಿನೆಡೆಗೆ ನಡೆವ ಧೀರ ಪಯಣದಲ್ಲಿ

ಈ ಪದ್ಯಭಾಗವನ್ನು ಶ್ರೀ ಕೆ. ಎಸ್. ನರಸಿಂಹಸ್ವಾಮಿ ಅವರು ರಚಿಸಿರುವ **'ನವ ಪಲ್ಲವ'** ಕವನ ಸಂಕಲನದಿಂದ ಆಯ್ದ **'ಭಾರತೀಯತೆ'** ಎಂಬ ಆಧುನಿಕ ಕವನದಿಂದ ಆರಿಸಲಾಗಿದೆ.

"ನಾವು ನಾಡಿಗಾಗಿ ಬಲಿದಾನ ಮಾಡಿದ ಹುತಾತ್ಮರನ್ನು ಸದಾ ನೆನೆಯುತ್ತಿದ್ದೇವೆ. ನಾವು ಕಷ್ಟದಲ್ಲಿದ್ದರೂ ನೆರೆ ರಾಷ್ಟ್ರಗಳಿಗೆ ಸಹಾಯದ ಹಸ್ತ ಚಾಚುತ್ತಿದ್ದೇವೆ. ನಾವು ನಡೆಯುವ ಮಾರ್ಗದಲ್ಲಿ ಏಳುಬೀಳುಗಳಿದ್ದರೂ, ಆತಂಕದ ಬಿರುಗಾಳಿ ಮೊಳಗುತ್ತಿದ್ದರೂ, ನಮ್ಮ ಗುರಿಯ ಬೆಳಕಿನೆಡೆಗೆ ನಮ್ಮ ಧೀರ ಪಯಣ ಸಾಗುತ್ತಿದೆ. ನಾವು ಎಲ್ಲೇ ಇರಲಿ ನಾವೆಲ್ಲರೂ ಒಂದು, ನಾವು ಭಾರತೀಯರು ಎಂಬ ದೇಶಾಭಿಮಾನ ನಮ್ಮಲ್ಲಿದೆ" ಎಂದು ಕವಿಗಳು ವರ್ಣಿಸುತ್ತಾರೆ.

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1*2=2**

**24.** ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧು
**ಇಲ್ಲೆಂಬ ಗಾದೆನುಡಿ ಕೇಳಿರುವೆನು.**
**ಗೆಳೆತನದ ಶುಚಿರುಚಿಯು ಇದಕು ಮಿಗಿಲಾಗಿಹುದು**
**ಎಂಬ ಸಾಹಸ ಮಾಡೆ ದೋಷವೇನು?**
**ಕಂಡ ಕಂಡವರೇನು ಬಲ್ಲರಿದನು**
ಉಂಡವನು ಕಂಡಿಹನು ಇದರ ಹದನು.

**ಕೊಟ್ಟಿರುವ ಪ್ರಶ್ನೆಗಳಲ್ಲಿ ಯಾವುದಾದರೂ ಒಂದಕ್ಕೆ ಸುಮಾರು ಆರು/ಏಳು ವಾಕ್ಯಗಳಲ್ಲಿ ಉತ್ತರಿಸಿರಿ.** **1*3=3**

**25. * ಡಿವಿಜಿ ಅವರ ವ್ಯಕ್ತಿತ್ವವನ್ನು ಸಂಗ್ರಹಿಸಿ ಬರೆಯಿರಿ.**

ಡಿವಿಜಿ ಅವರು ಆಧುನಿಕ ಕನ್ನಡ ಸಾಹಿತ್ಯದ ದಿಗ್ಗಜರಲ್ಲಿ ಒಬ್ಬರು. ಕನ್ನಡ ಸಾರಸ್ವತ ಲೋಕದ ಭೀಷ್ಮ ಎಂದು ಕರೆಸಿಕೊಂಡವರು. ಅವರದ್ದು ಹೋಲಿಕೆ ಇಲ್ಲದ ಅಪೂರ್ವ ವ್ಯಕ್ತಿತ್ವ. ಇತರ ಸಾಹಿತಿಗಳಂತೆ ಅವರು ಸಾಹಿತಿ ಮಾತ್ರವಾಗಿರಲಿಲ್ಲ. ಹೆಸರಾಂತ ಪತ್ರಕರ್ತರಾಗಿದ್ದರು. ಹಿರಿಯ ವೇದಾಂತಿಯಾಗಿದ್ದರು. ರಾಜ್ಯಶಾಸ್ತ್ರದಲ್ಲಿ ಆಳವಾದ ತಿಳಿವಳಿಕೆಯುಳ್ಳವರಾಗಿದ್ದರು. ಸಾರ್ವಜನಿಕ ಜೀವನಕ್ಕೆ ಸಂಬಂಧಿಸಿದ ಎಲ್ಲ ವಿಚಾರಗಳ ಮಂಥನಕ್ಕಾಗಿ 'ಗೋಖಲೆ ಸಾರ್ವಜನಿಕ ಸಂಸ್ಥೆ' ಕಟ್ಟಿದ ಮಹಾಧೀಮಂತರಾಗಿದ್ದರು. ಡಿವಿಜಿ ಅವರು ದೊಡ್ಡ ಡಿಗ್ರಿ ಪಡೆದವರೂ ಅಲ್ಲ, ಭಾರಿ ಶ್ರೀಮಂತರೂ ಅಲ್ಲ, ದೊಡ್ಡ ಅಧಿಕಾರಿಯೂ ಅಲ್ಲ. ಆದರೂ ಮೈಸೂರು ರಾಜ್ಯದ ಪರಮೋಚ್ಚ ಅಧಿಕಾರ ಹಿಡಿದಿದ್ದ ಮಿರ್ಜಾ ಸಾಹೇಬರೂ ಅವರ ಸ್ನೇಹ ತಪ್ಪಿತೆನಿಸಿ ಕಳವಳಗೊಂಡಿದ್ದರು. ಇಂತಹ ವ್ಯಕ್ತಿತ್ವ ಅವರಿಗೆ ಬಂದಿದ್ದು ಕೇವಲ ಶೀಲ, ವಿವೇಕ, ನಿಸ್ಪೃಹತೆ, ಸ್ವಯಂ ಆರ್ಜಿತ ಪಾಂಡಿತ್ಯ, ಸಾರ್ವಜನಿಕ ಹಿತಾಸಕ್ತಿಗಳ ಬಲದಿಂದ. ಮಿರ್ಜಾರ ಕಾಲಕ್ಕೆ ಅವರು ದೊಡ್ಡ ಮೇಧಾವಿಯೆಂದು ವಿದ್ಯಾವಂತರ ವಲಯದಲ್ಲಿ ಹೆಸರಾಗಿದ್ದರು.

**ಅಥವಾ**

*** ಡಿವಿಜಿ ಅವರಿಗೂ ಅವರ ಶ್ರೀಮತಿ ಅವರಿಗೂ ನಡೆದ ಸಂಭಾಷಣೆಯನ್ನು ಬರೆಯಿರಿ.**

ಒಮ್ಮೆ ಡಿವಿಜಿ ಅವರು ತಮ್ಮ ಬಂಧುಗಳ ಮನೆಯಲ್ಲಿ ನಡೆದ ಉತ್ಸವಕ್ಕೆ ಹೋಗಲಾಗದ್ದರಿಂದ ತಮ್ಮ ಹೆಂಡತಿ ಮಕ್ಕಳಿಗೆ ಹೋಗಲು ತಿಳಿಸಿದರು. ಎಷ್ಟು ಹೊತ್ತಾದರೂ ಹೆಂಡತಿ ಮನೆಯಲ್ಲೇ ಇದ್ದಿದ್ದನ್ನು ಕಂಡು ಡಿವಿಜಿ ಅಸಮಾಧಾನಗೊಂಡು "ನೀನು ಉತ್ಸವಕ್ಕೆ ಹೋಗುವುದಿಲ್ಲವೇ?" ಎಂದರು. ಆಗ ಅವರ ಹೆಂಡತಿ "ಮಕ್ಕಳನ್ನು ಕಳುಹಿಸಿದ್ದೇನೆ. ಮನೆಯಲ್ಲಿ ಯಾರಾದರೂ ಇರಬೇಕಲ್ಲ." ಎಂದು ಏನೇನೋ ಸಬೂಬು ಹೇಳಿದರೂ ಅವರು ಅದಕ್ಕೆ ಒಪ್ಪಲಿಲ್ಲ. ಆಗ ನಿಜವಾದ ಕಾರಣ ಹೊರಬರಲೇ ಬೇಕಾಯಿತು, ಡಿವಿಜಿ ಅವರ ಹೆಂಡತಿ "ನಾನು ಹೇಳಬಾರದೆಂದಿದ್ದೆ. ನೀವು ಪಟ್ಟು ಹಿಡಿದು ಬಾಯಿಬಿಡಿಸುತ್ತಿದ್ದೀರಿ. ನನ್ನ ಹತ್ತಿರ ಇರುವುದು ಇದೊಂದೇ ಸೀರೆ. ಇದೂ ಒಂದೆರಡು ಕಡೆ ಹರಿದಿದೆ. ನಾನು ಈ ಬಟ್ಟೆಯಲ್ಲಿ ಹೊರಗೆ ಕಾಣಿಸಿಕೊಂಡರೆ ಜನ ನಿಮ್ಮನ್ನು ಕುರಿತು ಆಡಿಕೊಳ್ಳುವುದಿಲ್ಲವೇ? ಬಂಧುಗಳ ಮನೆಗೆ ಹೋಗಿ ಬರುವುದು ಹೇಗೆ ನನಗೆ ಕರ್ತವ್ಯವೋ ಹಾಗೆ ನಿಮ್ಮ ಮರ್ಯಾದೆಗೆ ಊನಬಾರದಂತೆ ನಡೆದುಕೊಳ್ಳುವುದೂ ನನಗೆ ಕರ್ತವ್ಯವೇ ಅಲ್ಲವೇ?" ಎಂದು ಬಂಧುಗಳ ಮನೆಗೆ ಹೋಗದ್ದಕ್ಕೆ ಕಾರಣ ತಿಳಿಸಿದರು.

**26. ನಿಮ್ಮ ಶಾಲೆಯಲ್ಲಿ ನಡೆಯುವ ಪ್ರತಿಭೋತ್ಸವ ಕಾರ್ಯಕ್ರಮಕ್ಕೆ ಆಗಮಿಸುವಂತೆ ತಿಳಿಸಿ, ಗೆಳೆಯನಿಗೆ ಪತ್ರ ಬರೆಯಿರಿ.** **1*4=4**

| | |
|---|---|
| **ಪತ್ರದ ಪ್ರಾರಂಭದ ಒಕ್ಕಣಿಕೆ** | **1 ಅಂಕ** |
| **ಪತ್ರದ ಒಡಲು** | **1 ಅಂಕ** |
| **ಪತ್ರದ ಮುಕ್ತಾಯದ ಒಕ್ಕಣಿಕೆ** | **1 ಅಂಕ** |
| **ಭಾಷಾಶೈಲಿ** | **1 ಅಂಕ** |
| **ಒಟ್ಟು** | **4 ಅಂಕಗಳು** |


**ಅಥವಾ**

**ಕೊಟ್ಟಿರುವ ಯಾವುದಾದರೂ ಒಂದು ವಿಷಯವನ್ನು ಕುರಿತು ಹತ್ತು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.**

* ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ವಿದ್ಯಾರ್ಥಿಗಳ ಪಾತ್ರ.
* ಶಾಲಾ ಸ್ವಚ್ಛತೆಯನ್ನು ಕಾಪಾಡುವಲ್ಲಿ ವಿದ್ಯಾರ್ಥಿಗಳ ಪಾತ್ರ.

| | |
|---|---|
| **ಪ್ರಬಂಧದ ಪೀಠಿಕೆ** | **1 ಅಂಕ** |
| **ವಿಷಯದ ಬೆಳವಣಿಗೆ** | **1 ಅಂಕ** |
| **ಪ್ರಬಂಧದ ಮುಕ್ತಾಯ** | **1 ಅಂಕ** |
| **ಭಾಷಾಶೈಲಿ** | **1 ಅಂಕ** |
| **ಒಟ್ಟು** | **4 ಅಂಕಗಳು** |

# ನಿಮ್ಮ ಶಾಲೆಯ ಉತ್ತಮ ಫಲಿತಾಂಶಕ್ಕಾಗಿ ನಮ್ಮ ಪ್ರಕಟಣೆಗಳು

















ನಿಮ್ಮ ಪ್ರೀತಿಯ ಗೆಳೆಯ

**ಬಿ. ರವೀಶ್ ಕುಮಾರ್**

ನಿವೃತ್ತ ಕನ್ನಡ ಭಾಷಾ ಶಿಕ್ಷಕರು

ರಾಜ್ಯ ಸಂಪನ್ಮೂಲ ವ್ಯಕ್ತಿಗಳು (ಕನ್ನಡ)

# 2905, ಹೊನ್ನಸಿರಿ, 3 ನೆಯ ತಿರುವು,

'ಎಫ್' ಬ್ಲಾಕ್, ಕನಕದಾಸನಗರ, ಮೈಸೂರು – 570033

**ಸಂಚಾರಿವಾಣಿ ಸಂಖ್ಯೆ : 9448958498**